ಮುಂದಿನ ದಿನಗಳಲ್ಲಿ ಮಾಸ್ಟರು ಆ ದಾರಿಯಾಗಿ ಬರುವಾಗ ಅಲ್ಲೆಲ್ಲಾದರೂ ತನ್ನನ್ನು ಕಂಡರೆ ಆ ಕಣ್ಣುಗಳಲ್ಲಿ ಮಿಂಚೊಂದು ಮೂಡುವುದನ್ನು ಅಕ್ಕು ಗಮನಿಸಿದ್ದಳು. ಆಗೆಲ್ಲಾ ಮನಸ್ಸಿನೊಳಗೆ ನವಿಲುಗರಿಯಿಂದ ಮೆಲ್ಲನೆ ನೇವರಿಸಿದಂತಾಗುತ್ತಿತ್ತು ಅವಳಿಗೆ. ಪ್ರತಿ ಶನಿವಾರ ಮಾಸ್ತರು ಸಂತೆಗೆ ಹೋಗುವ ಹೊತ್ತಿಗೆ ಅಕ್ಕುವಿಗೆ ತೋಟದ ಆ ಬದಿಯಲ್ಲಿ ಏನಾದರೂ ಕೆಲಸ ಇದ್ದೇ ಇರುತ್ತಿತ್ತು ಎಂಬಂತಾಗಿತ್ತು. ಆ ಹೊತ್ತಿಗೆ ಅಂತಕ್ಕ ಇನ್ನೇನಾದರೂ ಕೆಲಸ ಹೇಳಿದರೂ ಏನಾದರೂ ನೆವ ಒಡ್ಡಿ ಕಾಲ್ದಾರಿಯ ಬದಿಗೆ ಬರುವವಳಿಗೆ ಎಲ್ಲಾದರು ಮಾಸ್ತರು ಕಣ್ಣಿಗೆ ಬೀಳದಿದ್ದರೆ ಏನೋ ಕಳೆದುಕೊಂಡ ಭಾವ! ಆಗೆಲ್ಲಾ ಅಂತಕ್ಕನಲ್ಲಿ ಸುಮ್ಮಸುಮ್ಮನೆ ಜಗಳಾಡಿ ಅಂತಕ್ಕನ ಬಾಯಿಂದ, "ಏನೇ ರಾವು ಹಿಡಿದಿದೆಯೇನೆ ನಿನಗೆ" ಎಂದು ಬೈಸಿಕೊಳ್ಳುತ್ತಿದ್ದಳು ಅಕ್ಕು. ತನ್ನ ಯೋಚನೆ ತಪ್ಪು ಎಂದು ತಿಳಿದಿದ್ದರೂ ಅವಳನ್ನು ಕಾಣುವಾಗ ಮಾಸ್ತರ ಕಣ್ಣಲ್ಲಿ ಹರಿಯುವ ಮಿಂಚು ನೀಡುವ ಪುಳಕದ ಮತ್ತು ಮತ್ತೇನನ್ನೂ ಚಿಂತಿಸಲೂ ಬಿಡುತ್ತಿರಲಿಲ್ಲ. ಮಯ್ಯರ ಸಂಸ್ಕೃತ ಶಾಲೆ ಇದೀಗ

